Sri A. BHEEMAPPA NAIK.—Will not this speedy arrangement improve the Grow More Food Campaign, thereby placing the Harijans on a better footing?

Sri Kadidal MANJAPPA.—It is a matter of opinion.

ಶ್ರೀ ಜಿ. ದುಗ್ಗಪ್ಪನವರು (ಹೊಳಲ್ಕೆರೆ-ಅನುಸೂಚಿತ ಜಾತಿಗಳು).—ಲ್ಯಾಂಡ್ ರೆವೆನ್ಯೂ ಕೋಡ್ ಪ್ರಕಾರ ಹರಿಜನರಿಗೆ ಜಮೀನು ಮಂಜೂರುಮಾಡುವಾಗ ಗ್ರಾಮಸ್ಥರ ಮತ್ತು ಬಾಜೂದಾರರ ಸಮ್ಮತಿ ಅವಶ್ಯಕವೆಂಬುದು ಸರ್ಕಾರದ ಗಮನದಲ್ಲಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಇದೆ.

ಶ್ರೀ ಜಿ. ದುಗ್ಗಪ್ಪನವರು.—ಹರಿಜನರ ದರಖಾಸ್ತು ಮಂಜೂರು ಮಾಡುವಾಗ ಗ್ರಾಮಸ್ಥರು ಸಮ್ಮತಿ ಕೊಡುವುದಿಲ್ಲವೆಂಬುದು ಗೊತ್ತೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೆಲವು ಸಂದರ್ಭಗಳಲ್ಲಿ ಹರಿಜನರಾಗಲಿ, ಇತರರಾಗಲಿ ದರಖಾಸ್ತು ಹಾಕಿದಾಗ ಆ ರೀತಿ ಆಗಿರುವುದು ಗೊತ್ತು.

ಶ್ರೀ ಜಿ. ದುಗ್ಗಪ್ಪನವರು.—ದರಖಾಸ್ತುಗಳು ನಿಂತಿರುವುದು ಮುಖ್ಯವಾಗಿ ಈ ಕಾರಣದಿಂದ ಅಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಈ ಕಾರಣದಿಂದಲ್ಲ.

Water rate in the wet atchkat below the Marconahalli Reservoir.

Q.—406. **Sri N. HUCHMASTHY GOWDA** (Huliyurdurga).—

Will the Government be pleased to state:—

(*a*) the total amount of "water rate" that has to be collected per year in the wet atchkat below the Marconahalli Reservoir;

(*b*) the amount of "water rate" fixed per acre?

A.—**Sri Kadidal MANJAPPA** (Minister for Revenue and Public Works).—

(a) Rs. 48,660.

(*b*) Rs. 6 per acre on dry lands newly brought under irrigation and Rs. 2 per acre of existing wet and garden lands.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—6 ರೂಪಾಯಿಗಳ ವಾಟರ್ ರೇಟ್ ಗೊತ್ತುಮಾಡಿರುವುದು ಇತರ ಕಡೆಗಳಲ್ಲಿರುವುದಕ್ಕೆ ಸರಿಸಮವಾಗಿದೆಯೆ ಅಥವಾ ಹೆಚ್ಚಾಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಇತರ ಕಡೆ ಎಂದರೆ ಎಲ್ಲ?

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಇರ್ವಿನ್ ನಾರೆ ಮತ್ತು ಇತರ ದೊಡ್ಡ ದೊಡ್ಡ ಕೆರೆ ಆಶ್ರಯವಿರುವ ಕಡೆ.

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಯಾವ ಆಧಾರದ ಮೇಲೆ ವಾಟರ್ ರೇಟ್ ಗೊತ್ತುಮಾಡುವುದು?

ಶ್ರೀ ಕಡಿದಾಳ್ ಮಂಜಪ್ಪನವರು.—ಕಾನೂನು ಪ್ರಕಾರ ಮತ್ತು ಜಮೀನಿಗೆ ಹಿಂದೆ ವಿಧಿಸಿರುವ ಕಂದಾಯದ ಆಧಾರದ ಮೇಲೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹಿಂದೆ ವಿಧಿಸಿರುವ ಕಂದಾಯದ ಮೇಲೆಯೇ ಅಥವಾ ನೀರಿನ ಆಶ್ರಯ ದೊರೆತಿದೆ ಎಂಬ ಆಧಾರದ ಮೇಲೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದಕ್ಕೆ ಉಚಿತವಾಗಿ ಕಾನೂನಿದೆ. ಅದರ ಪ್ರಕಾರ ನಿಗದಿ ಮಾಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅಲ್ಲ ಹಳೇ ತರೀಗೆ 2 ರೂಪಾಯಿ ಇಲ್ಲವೆ! ಇದಲ್ಲದೆ ಎಕರೇಜ್ ಸೆಸ್ ಈ ಕೆರೆ ಹಿಂದಿನ ಜಮೀನಿಗೆ ಹಿಂದೆ ಇತ್ತೆ? ಎಕರೇಜ್ ಸೆಸ್ ಹಿಂದೆ ತಗೆದುಕೊಳ್ಳುತ್ತಿದ್ದುದು ನಿಜವಾದರೆ ಎರಡು ರೂಪಾಯಿ ಹೆಚ್ಚಿನುವುದಕ್ಕೆ ಕಾರಣವನ್ನು ವಿವರ್ಸೆ ಮಾಡುತ್ತೀರಾ?

Sri Kadidal MANJAPPA.—Certainly.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ವರ್ಷಕ್ಕೆ ಎಷ್ಟು ವಾಟರ್ ರೇಟ್ ವಸೂಲಾಗುತ್ತಿದೆ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈಗತಾನೆ ಆಗಿರುವ ಮಾರ್ಕೋನಹಳ್ಳಿ ಕೆರೆಯ ವಾಟರ್ ರೇಟ್ ಪೊಬಲಗನ್ನು ಹೇಳಲು ನೋಟೀಸ್ ಬೇಕೆ?

Mr. SPEAKER.—Any other supplementary?

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಬಾಕಿ ಇರುವುದೆಷ್ಟು?

ಶ್ರೀ ಕಡಿದಾಳ್ ಮಂಜಪ್ಪನವರು.—ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಬಡ್ಡಿ ವಸೂಲು ಮಾಡುತ್ತಿರುವುದು ವಾಟರ್ ರೇಟ್ ಮೇಲೋ?

ಶ್ರೀ ಕಡಿದಾಳ್ ಮಂಜಪ್ಪನವರು.—ಕಾನೂನು ಪ್ರಕಾರ ಬಾಕಿಯಿದ್ದರೆ ವಸೂಲು ಮಾಡುತ್ತಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ವಾಟರ್ ರೇಟ್ ಮೇಲೆ ಬಡ್ಡಿ ವಸೂಲು ಮಾಡುವುದು ಜಾರಿಯಲ್ಲಿದೆಯೇ?

Mr. SPEAKER.—The Hon'ble Member evidently means Contribution Cess.

ಶ್ರೀ ಕಡಿದಾಳ್ ಮಂಜಪ್ಪನವರು.—ಇದೆಯೆಂದು ತಿಳಿದು ಬಂದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈಗ ವಾಟರ್ ರೇಟ್ ಕೊಡಬೇಕಾದ್ದು ಲಕ್ಷಾಂತರ ರೂಪಾಯಿಗಳಷ್ಟು ಬಾಕಿಯಿದ್ದರೆ ಬಡ್ಡಿ ತೆಗೆದುಕೊಳ್ಳುವುದನ್ನು ನಿಲ್ಲಿಸಿ ವಾಟರ್ ರೇಟನ್ನು ಮಾತ್ರ ವಸೂಲು ಮಾಡುವುದಕ್ಕೆ ಅವಕಾಶ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಯೋಚನೆ ಮಾಡುತ್ತೇವೆ.

ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ಎಕಾನಮಿ ಆಫೀಸರು ಎಕರೆಗೆ 20 ರೂಪಾಯಿಗಳ ಕಂದಾಯ ಹಾಕಬೇಕು ಎಂದು ಸಲಹೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ).—ವಿಶ್ವೇಶ್ವರಯ್ಯ ನಾಲಾ ಕಳಗೆ ಹತ್ತು ರೂಪಾಯಿಗಳು ಹಾಕಿರುವುದು ಗೊತ್ತೆ?

Sri Kadidal MANJAPPA.—That does not arise.